IJRAR.ORG E-ISSN: 2348-1269, P-ISSN: 2349-5138

INTERNATIONAL JOURNAL OF RESEARCH AND ANALYTICAL REVIEWS (IJRAR) | IJRAR.ORG

An International Open Access, Peer-reviewed, Refereed Journal

# ಅಂತಿಮ ಆಧುನಿಕ ಕಾಲಾವಧಿಯ ತುಳು ಕಾದಂಬರಿಗಳಲ್ಲಿ ಸಾಮಾಜಿಕ ನ್ಯಾಯ ಮತ್ತು ದಲಿತ ಚಿಂತನೆ : ಒಂದು ತಾತ್ವಿಕ ವಿಶ್ಲೇಷಣೆ

**- ಸೌಮ್ಯ ಆನಂದಿ ಕೋಟ್ಯಾನ್, -ಡಾ. ಬಿ. ಎಸ್. ಶಿವಕುಮಾರ್**

ತುಳು ಸಾಹಿತ್ಯವು ಕರಾವಳಿ ಕರ್ನಾಟಕದ ಸಾಮಾಜಿಕ ಸಾಂಸ್ಕೃತಿಕ ಜೀವನದ ಆಳವಾದ ಪ್ರತಿಬಿಂಬವಾಗಿದೆ. ಮೌಖಿಕ ಪರಂಪರೆಯಿಂದ ಬೆಳೆದು ಬಂದ ಈ ಸಾಹಿತ್ಯವು ಆಧುನಿಕ ಯುಗದಲ್ಲಿ ಕಾದಂಬರಿ ಪ್ರಕಾರದ ಮೂಲಕ ಸಮಾಜದ ಅಂತರಾಳದಲ್ಲಿರುವ ಅಸಮಾನತೆ, ಶೋಷಣೆ ಮತ್ತು ಪರಿವರ್ತನೆಯ ಚಲನೆಯನ್ನು ದಾಖಲಿಸಿದೆ. ವಿಶೇಷವಾಗಿ ತುಳು ಕಾದಂಬರಿಗಳು ಜಾತಿ, ವರ್ಗ, ಲಿಂಗ ಮತ್ತು ಆರ್ಥಿಕ ಅಸಮತೋಲನಗಳನ್ನು ಕಥಾನಕದ ಕೇಂದ್ರಕ್ಕೆ ತಂದು, ಸಾಮಾಜಿಕ ನ್ಯಾಯ ಮತ್ತು ದಲಿತ ಚಿಂತನೆಗಳ ಸೈದ್ಧಾಂತಿಕ ಆಯಾಮಗಳನ್ನು ಕಲಾತ್ಮಕವಾಗಿ ರೂಪಿಸಿವೆ. ೧೯೩೦ ರಿಂದ ೨೦೦೦ ರ ಅವಧಿಯನ್ನು ಇತಿಹಾಸಕಾರರು ಸಂಸ್ಕೃತಿಕ ಹಾಗೂ ಸಾಹಿತ್ಯಿಕ ಬೆಳವಣಿಗೆಯ ದೃಷ್ಟಿಯಿಂದ ತಡ ಆಧುನಿಕ ಕಾಲ ಅಥವಾ ಅಂತಿಮ ಆಧುನಿಕ ಯುಗವೆಂದು ಗುರುತಿಸಿದ್ದಾರೆ. ಈ ಅವಧಿ ಭಾರತೀಯ ಸಮಾಜದ ಪರಿವರ್ತನಾ ಪ್ರಕ್ರಿಯೆಯಲ್ಲಿ ಮಹತ್ವದ ಸಂಧಿಕಾಲವೆಂದು ಪರಿಗಣಿಸಲಾಗುತ್ತದೆ.

ಈ ಕಾಲಘಟ್ಟದಲ್ಲಿ ಪ್ರಕಟವಾದ ತುಳು ಕಾದಂಬರಿಗಳು ವಿಶೇಷವಾಗಿ ಜಾತಿ, ವರ್ಗ, ಲಿಂಗ ಮತ್ತು ಆರ್ಥಿಕ ಅಸಮತೋಲನಗಳಂತಹ ಸಾಮಾಜಿಕ ವಾಸ್ತವ್ಯಗಳನ್ನು ತಮ್ಮ ಕಥಾನಕದ ಕೇಂದ್ರ ವಿಷಯಗಳಾಗಿ ಸ್ವೀಕರಿಸಿವೆ. ಇದರ ಮೂಲಕ ಸಾಮಾಜಿಕ ನ್ಯಾಯ ಹಾಗೂ ದಲಿತ ಚಿಂತನೆಗಳಿಗೆ ಸಂಬಂಧಿಸಿದ ಸೈದ್ಧಾಂತಿಕ ಆಯಾಮಗಳನ್ನು ಕಲಾತ್ಮಕವಾಗಿ ರೂಪಿಸಿ, ಸಮಾಜದ ಅಂತರಾಳದಲ್ಲಿರುವ ಅಸಮಾನತೆಗಳನ್ನು ವಿಮರ್ಶಾತ್ಮಕವಾಗಿ ಅಭಿವ್ಯಕ್ತಿಸಿವೆ.

ಆರಂಭದಲ್ಲಿ ಪ್ರಕಟವಾದ 'ಮಿಥ್ಯನಾರಾಯಣ ಕಥೆ', ಯಿಂದ ಪ್ರಾರಂಭವಾಗಿ ನಂತರದ ಅವಧಿಯಲ್ಲಿ ಪ್ರಕಟವಾದ ಹಲವಾರು ತುಳು ಕಾದಂಬರಿಗಳಾದ 'ಲೆಕ್ಕೆಸಿರಿ', 'ಬೊಂಬಾಯಿದ ಇಲ್ಲ್', 'ಕುದುರುದ ಕೇದಗೆ', 'ಕಪ್ಪುಗಿಡಿ', 'ಮೂಜಂಜ ಆನಗ', 'ನಿಲೆ', 'ಚಂದ್ರಳ್ಳಿಡ್ ಬೊಳ್ಪಾಂಡ್' ಮೊದಲಾದ ಕೃತಿಗಳಲ್ಲಿ ದಲಿತ ಚಿಂತನೆ, ದಲಿತ ಸಂವೇದನೆಗಳು ಹಾಗೂ ಸಾಮಾಜಿಕ ನ್ಯಾಯದ ನೆಲೆಗಳು ಸ್ಪಷ್ಟವಾಗಿ ವ್ಯಕ್ತವಾಗುತ್ತವೆ.

ಕಾದಂಬರಿ ಪ್ರಕಾರವು ಪ್ರಚಲಿತ ಸಮಾಜದಲ್ಲಿ ನಡೆಯುತ್ತಿರುವ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯನ್ನು ಗುರುತಿಸಿ, ಅದನ್ನು ಚಿಂತನೆ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವಿಶ್ಲೇಷಿಸುವ ಪ್ರಮುಖ ಸಾಹಿತ್ಯ ರೂಪವಾಗಿದೆ. ತುಳು ಕಾದಂಬರಿಗಳೂ ಈ ದೃಷ್ಟಿಯಿಂದ ಹೊರತಲ್ಲ. ನಿರ್ದಿಷ್ಟ ತತ್ವಗಳು, ಸಾಮಾಜಿಕ ಆದರ್ಶಗಳು ಮತ್ತು ಜನಪರ ಹೋರಾಟಗಳ ಹಿನ್ನೆಲೆಯಲ್ಲಿಯೇ ಅನೇಕ ತುಳು ಕಾದಂಬರಿಗಳು ರಚನೆಯಾಗಿವೆ. ಇವು ಸ್ಥಾಪಿತ ಹಿತಾಸಕ್ತಿಗಳೊಂದಿಗೆ ನಡೆಯುವ ಘರ್ಷಣೆಗಳನ್ನು ಕೇವಲ ಘಟನೆಗಳಾಗಿ ಮಾತ್ರವಲ್ಲದೆ, ಸಾಮಾಜಿಕ ನ್ಯಾಯ ಮತ್ತು ದಲಿತ ಚಿಂತನೆಯ ಬೆಳಕಿನಲ್ಲಿ ವಿಶ್ಲೇಷಿಸುತ್ತವೆ.

ಸಾಮಾಜಿಕ ನ್ಯಾಯವು ಸಮಾನ ಹಕ್ಕುಗಳು, ಅವಕಾಶಗಳು ಮತ್ತು ಮಾನವೀಯ ಗೌರವದ ಸ್ಥಾಪನೆಯನ್ನು ಪ್ರತಿಪಾದಿಸುವ ಪರಿಕಲ್ಪನೆಯಾಗಿದೆ. ದಲಿತ ಚಿಂತನೆ ಅದರೊಳಗೆ ಶೋಷಿತ ಸಮುದಾಯದ ಆತ್ಮಗೌರವ, ಅಸ್ತಿತ್ವದ ಅರಿವು ಮತ್ತು ಪ್ರತಿರೋಧದ ಚೇತನವನ್ನು ಬಲಪಡಿಸುವ ಚಳವಳಿಯಾಗಿದೆ. ತುಳು ಕಾದಂಬರಿಗಳಲ್ಲಿ ಈ ಎರಡೂ ಪರಿಕಲ್ಪನೆಗಳು ಪರಸ್ಪರ ಪೂರಕವಾಗಿ ವ್ಯಕ್ತವಾಗುತ್ತವೆ.

ತುಳು ಕಾದಂಬರಿಗಳಲ್ಲಿ ಕಾಣಿಸಿಕೊಳ್ಳುವ ಸಾಮಾಜಿಕ ನ್ಯಾಯ ಮತ್ತು ದಲಿತ ಚಿಂತನೆಯ ಮೂರು ಪ್ರಮುಖ ಅಂಶಗಳನ್ನು ಈ ಕೆಳಗಿನಂತೆ ಗುರುತಿಸಬಹುದು:

೧. ಅಸ್ತಿತ್ವದ ಅರಿವು
೨. ಶಿಕ್ಷಣ ಮತ್ತು ಜಾಗೃತಿಯ ಮೂಲಕ ಮುನ್ನಡೆ
೩. ಸಂಘಟಿತ ಹೋರಾಟ ಮತ್ತು ಹಕ್ಕಿನ ಆಗ್ರಹ

ತುಳು ಕಾದಂಬರಿಗಳ ಪ್ರಮುಖ ಲಕ್ಷಣವೆಂದರೆ, ದಲಿತ ಪಾತ್ರಗಳನ್ನು ಕೇವಲ ಶೋಷಿತರಾಗಿ ಮಾತ್ರವಲ್ಲದೆ, ತಮ್ಮ ಅಸ್ತಿತ್ವವನ್ನು ಮರು ಪರಿಗಣಿಸುವ ಚಲನೆಯುತ ವ್ಯಕ್ತಿಗಳಾಗಿ ಚಿತ್ರಿಸುವುದು. ಕುದ್ಕಾಡಿ ವಿಶ್ವನಾಥ ರೈ ಅವರ 'ಲೆಕ್ಕೆಸಿರಿ' ಕಾದಂಬರಿಯಲ್ಲಿ ಬೊಗ್ಗನಿಂದ "ಆನಂದ"ನಾಗುವ ನಾಯಕನ ಪಯಣವು ಅಸ್ತಿತ್ವದ ಪುನರ್‌ನಿರ್ಮಾಣದ ಸಂಕೇತವಾಗಿದೆ. ಹೆಸರಿನ ಬದಲಾವಣೆಯು ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಪರಿವರ್ತನೆಯ ಸೂಚಕವಾಗುತ್ತದೆ. ಶಿಕ್ಷಣ ಮತ್ತು ಮಾರ್ಗದರ್ಶನದ ಮೂಲಕ ಅವನು ಜಾತಿ ಆಧಾರಿತ ಕೀಳರಿಮೆಯನ್ನು ಮೀರಿ ಆತ್ಮವಿಶ್ವಾಸವನ್ನು ರೂಪಿಸಿಕೊಳ್ಳುತ್ತಾನೆ. ಇಲ್ಲಿ ದಲಿತ ಚಿಂತನೆಯ 'ಅಸ್ತಿತ್ವದ ಅರಿವು' ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಮಾಧವ ಪೆರಾಜೆಯವರ 'ನಿಲೆ' ಕಾದಂಬರಿಯಲ್ಲಿ ಅಸ್ತಿತ್ವದ ಪ್ರಶ್ನೆಯೇ ಕೇಂದ್ರವಾಗುತ್ತದೆ. ಇಲ್ಲಿ ಧನಿಗಳ ತೋಟದಲ್ಲಿ ಪಾರಂಪರಿಕವಾಗಿ ಜೀತದಾಳುಗಳಾಗಿ ದುಡಿಯುತ್ತಿರುವ ದಲಿತ ಕುಟುಂಬವೊಂದು ಎರಡು ತಲೆಮಾರುಗಳ ಅಂತರದಲ್ಲಿ ಪರಿವರ್ತನೆಯ ನೆಲೆಯನ್ನು ಕಂಡುಕೊಳ್ಳುತ್ತದೆ. ದಲಿತರು ಅನುಭವಿಸುವ ದೇವಸ್ಥಾನ ಪ್ರವೇಶ ನಿರಾಕರಣೆ ಹಾಗೂ ಶಾಲಾ ತಾರತಮ್ಯದ ಘಟನೆಗಳು ಅವರ ವೈಯಕ್ತಿಕ ಅನುಭವಗಳಷ್ಟೇ ಅಲ್ಲದೆ, ಅವು ಸಮಾಜದ ರಚನಾತ್ಮಕ ಅನ್ಯಾಯದ ಸಂಕೇತಗಳಾಗಿವೆ. ಆದರೆ ಕಾಲ ಬದಲಾವಣೆಯ ನಿಯಮದಲ್ಲಿ ಕಾದಂಬರಿಯ ಅಂತ್ಯದಲ್ಲಿ ವ್ಯಕ್ತವಾಗುವ ಆತ್ಮಗೌರವ, ದಲಿತರ ಹೊಸ ಚೈತನ್ಯಕ್ಕೆ ದಾರಿ ತೋರಿಸುತ್ತದೆ.

ತುಳು ಕಾದಂಬರಿಗಳಲ್ಲಿ ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಪ್ರಮುಖ ಸಾಧನವಾಗಿ ಕಾಣುತ್ತದೆ. ಸಂಕಲಕರಿಯ ಕೃಷ್ಣ ಸಾಲ್ಯಾನ್ ಅವರ 'ಚಂದ್ರಳ್ಳಿಡ್ ಬೊಳ್ಪಾಂಡ್' ಕಾದಂಬರಿಯಲ್ಲಿ ಮಾರಣ್ಣ ಶೆಟ್ಟಿಯ ಪಾತ್ರವು ಪಾರಂಪರಿಕ ಮಿತಿಗಳನ್ನು ಮೀರಿ ಮಗಳಿಗೆ ಉನ್ನತ ಶಿಕ್ಷಣ ನೀಡುವ ಮೂಲಕ ಜಾತಿ ಮತ್ತು ಲಿಂಗ ಭೇದಗಳನ್ನು ಪ್ರಶ್ನಿಸುತ್ತದೆ. ಕುಡಿತದ ದುಷ್ಟ ಚಟದ ಅಂತಿಮ ಬಲಿ , ದಲಿತ ಸಮುದಾಯವೇ ಆಗಿದ್ದರೂ, ಸಮಾಜದ ಸಂಘಟಿತ ಹೋರಾಟಗಳು ಪರಿಸ್ಥಿತಿಯನ್ನು ಮೀರಿಸಬಲ್ಲವು ಎಂಬ ಆಶಾಭಾವನೆಯನ್ನು ಕಾದಂಬರಿ ಪ್ರತಿಪಾದಿಸುತ್ತದೆ. ಇಲ್ಲಿ ಶಿಕ್ಷಣವು ವೈಯಕ್ತಿಕ ಸಾಧನೆಗೆ ಸೀಮಿತವಾಗದೆ, ಸಮುದಾಯದ ಹಾಗೂ ದಲಿತರ ಸಂಕಟದಿಂದ ಮುಕ್ತಿಯ ಸಂಕೇತವಾಗಿ ರೂಪುಗೊಳ್ಳುತ್ತದೆ. ಶೋಷಿತರಿಗೆ, ದಲಿತರಿಗೆ ಜ್ಞಾನವು ಕೇವಲ ಮಾಹಿತಿಯ ಸಂಗ್ರಹವಲ್ಲ, ಅದು ಆತ್ಮಗೌರವದ ಪುನರ್‌ಸ್ಥಾಪನೆಯ ಮಾರ್ಗವಾಗಿದೆ ಎಂಬ ನಿಲುವನ್ನು ಕಾದಂಬರಿಕಾರರು ಮುಂದಿಡುತ್ತಾರೆ.

ಜಿತು ನಿಡ್ಲೆಯವರ 'ಮೂಜಂಜ ಆನಗ' ಹಾಗೂ ಜಾನಕಿ ಬ್ರಹ್ಮಾವರ ಎಂ. ರವರ **'ಕಪ್ಪುಗಿಡಿ'** ಕಾದಂಬರಿಗಳು ಆರ್ಥಿಕ ಮತ್ತು ಕಾನೂನುಬದ್ಧ ನ್ಯಾಯದ ಆಯಾಮಗಳನ್ನು ತೆರೆದಿಡುತ್ತವೆ. 'ಮೂಜಂಜ ಆನಗ' ದಲ್ಲಿ ಭೂಸೂದೆ ಕಾಯ್ದೆಗಳ ಹಿನ್ನೆಲೆಯಲ್ಲಿನ ರೈತ–ಕೆಳವರ್ಗದ ಹೋರಾಟ, ವರ್ಗ ಚಿಂತನೆಯನ್ನು ವ್ಯಕ್ತಪಡಿಸುತ್ತದೆ. ಈ ಕಾದಂಬರಿಯ ಚೆನ್ನಜ್ಜನ ಪಾತ್ರವು ದಲಿತ ಶ್ರಮಜೀವಿಯ ಆತ್ಮಗೌರವದ ಪ್ರತಿನಿಧಿಯಾಗುತ್ತದೆ. ತನ್ನ ಮಗನು ಬೇರೆ ಜಾತಿಯ ಹೆಣ್ಣನ್ನು ಮದುವೆಯಾಗಲು ಮೌನ ಸಮ್ಮತಿಯನ್ನು ನೀಡುವ ಮೂಲಕ ಅವನು ಪರಂಪರೆಯನ್ನು ದಾಟಿ ಪರಿವರ್ತನೆಯ ಹೊಸ ಮೌಲ್ಯಗಳಿಗೆ ಆದ್ಯತೆ ನೀಡುತ್ತಾನೆ. ಜಾನಕಿ ಬ್ರಹ್ಮಾವರ ಎಂ. ಅವರ 'ಕಪ್ಪುಗಿಡಿ' ಕಾದಂಬರಿಯಲ್ಲಿ ಕಾನೂನುಬದ್ಧ ಪರಿವರ್ತನೆಗಳು ಗ್ರಾಮೀಣ ಸಂಬಂಧಗಳಲ್ಲಿ ಉಂಟುಮಾಡುವ ಅಸ್ಥಿರತೆಯನ್ನು ಚಿತ್ರಿಸಲಾಗಿದೆ. ಸಮಾನತೆಯ ಆಶಯದಿಂದ ಬಂದ ಕಾನೂನುಗಳು ಪಾರಂಪರಿಕ ವ್ಯವಸ್ಥೆಗಳೊಂದಿಗೆ ಘರ್ಷಣೆಗೊಳ್ಳುವ ಸಂದರ್ಭಗಳಲ್ಲಿ ಸಾಮಾಜಿಕ ನ್ಯಾಯದ ಸಂಕೀರ್ಣತೆಯನ್ನು ಈ ಕಾದಂಬರಿ ಅನಾವರಣಗೊಳಿಸುತ್ತದೆ.

'ನಿಲೆ', 'ಲೆಕ್ಕೆಸಿರಿ', ಗಳಲ್ಲದೆ ಜಾನಕಿ ಬ್ರಹ್ಮಾವರ ಎಂ. ಅವರ 'ಕುದುರುದ ಕೇದಗೆ', ಕೆ.ಟಿ. ಗಟ್ಟಿ ಅವರ 'ಬೊಂಬಾಯಿದ ಇಲ್ಲ್' ಮೊದಲಾದ ಕಾದಂಬರಿಗಳು ಸಾಮಾಜಿಕ ಅಸಮಾನತೆಯ ಮಧ್ಯೆ ಮನುಷ್ಯನು ಎದುರಿಸುವ ಅನಿವಾರ್ಯ ಸನ್ನಿವೇಶಗಳನ್ನು ಚಿತ್ರಿಸುತ್ತವೆ. ಬಡತನ–ಸಿರಿತನ, ಮೇಲ್ವರ್ಗ–ಕೆಳವರ್ಗ, ಶೋಷಣೆ–ಪ್ರತಿರೋಧ ಎಂಬ ದ್ವಂದ್ವಗಳು ಇಲ್ಲಿ ಕಥಾಸಾರವನ್ನು ರೂಪಿಸುತ್ತವೆ. ಜಾತಿ ವ್ಯವಸ್ಥೆಯ ಮೂರ್ತರೂಪವು ವ್ಯಕ್ತಿಯ ಬದುಕನ್ನು ಹೇಗೆ ನಿಯಂತ್ರಿಸುತ್ತದೆ ಎಂಬುದನ್ನು ಇವು ಜೀವಂತವಾಗಿ ತೋರಿಸುತ್ತವೆ.

ತುಳು ಕಾದಂಬರಿಗಳಲ್ಲಿ ದಲಿತ ಮಹಿಳೆಯ ಅನುಭವವೂ ವಿಶೇಷವಾಗಿ ವ್ಯಕ್ತವಾಗುತ್ತದೆ. ಜಾತಿ ಮತ್ತು ಲಿಂಗದ ದ್ವಂದ್ವ ಒತ್ತಡಗಳ ನಡುವೆಯೂ 'ಕುದುರುದ ಕೇದಗೆ', 'ಕಪ್ಪುಗಿಡಿ', 'ಮೂಜಂಜ ಆನಗ', 'ನಿಲೆ', 'ಚಂದ್ರಳ್ಳಿಡ್ ಬೊಳ್ಪಾಂಡ್' ಮೊದಲಾದ ಕಾದಂಬರಿಗಳ ಕುಸುಮ, ಧಾರಕ್ಕ, ಒಳ್ಳೆ, ಪಾರು ಮುಂತಾದ ದಲಿತ ಮಹಿಳಾ ಪಾತ್ರಗಳು ಸ್ವತಂತ್ರ ಚಿಂತನೆಯ ಮೂಲಕ ಪ್ರತಿರೋಧ ವ್ಯಕ್ತಪಡಿಸುತ್ತವೆ. ಆ ಮೂಲಕ ಕಾದಂಬರಿಗಳ ದಲಿತ ಚಿಂತನೆಗೆ ಲಿಂಗಸಮಾನತೆಯ ಆಯಾಮ ಸೇರುತ್ತದೆ.

ಇಲ್ಲಿ ಪ್ರಮುಖವಾಗಿ ಗಮನಿಸಲ್ಪಡುವುದೇನೆಂದರೆ ತುಳು ಕಾದಂಬರಿಗಳಲ್ಲಿ ಪರಿವರ್ತನೆಯು ಹಿಂಸಾತ್ಮಕ ಕ್ರಾಂತಿಯ ರೂಪದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಬದಲಾಗಿ ಹಿರಿಯ ಮತ್ತು ಯುವ ಪೀಳಿಗೆಯ ನಡುವಿನ ಸಂವಾದದ ಮೂಲಕ ಕ್ರಮೇಣ ಬದಲಾವಣೆ ಉಂಟಾಗುತ್ತದೆ. ಸಮಾನತೆಯ ಆಶಯವು ಪರಂಪರೆಯನ್ನು ಸಂಪೂರ್ಣ ತಳ್ಳಿ ಹಾಕದೆ, ಅದನ್ನು ಪುನರ್‌ವ್ಯಾಖ್ಯಾನಿಸುವ ಮೂಲಕ ರೂಪುಗೊಳ್ಳುತ್ತದೆ. ಸಾಹಿತ್ಯದ ದೃಷ್ಟಿಯಿಂದ ನೋಡಿದಾಗ, ಸಾಮಾಜಿಕ ನ್ಯಾಯವು ಕೇವಲ ರಾಜಕೀಯ ಘೋಷಣೆ ಅಲ್ಲ, ಅದು ಮಾನವೀಯ ಗೌರವದ ಸೃಜನಾತ್ಮಕ ಅನ್ವೇಷಣೆಯಾಗಿದೆ. ಹೀಗೆ ತುಳು ಕಾದಂಬರಿಗಳು ಕಥೆ, ಸಂಕೇತ ಮತ್ತು ಸಂಭಾಷಣೆಗಳ ಮೂಲಕ ಜಾತಿ ಆಧಾರಿತ ಅನ್ಯಾಯವನ್ನು ಅನಾವರಣಗೊಳಿಸುತ್ತವೆ. ದಲಿತ ಚಿಂತನೆ ಇಲ್ಲಿ ಕರುಣೆಯ ಅಭಿವ್ಯಕ್ತಿಯಲ್ಲ, ಅದು ಚಿಂತನೆ ಮತ್ತು ಪ್ರತಿರೋಧದ ರೂಪವಾಗಿದೆ.

ಹೀಗಾಗಿ, ತುಳು ಕಾದಂಬರಿಗಳಲ್ಲಿ ಸಾಮಾಜಿಕ ನ್ಯಾಯ ಮತ್ತು ದಲಿತ ಚಿಂತನೆಗಳು ಪರಸ್ಪರ ಪೂರಕವಾದ ಸೈದ್ಧಾಂತಿಕ ಅಂಶಗಳಾಗಿ ವ್ಯಕ್ತವಾಗುತ್ತವೆ. ಅಸ್ತಿತ್ವದ ಅರಿವು, ಶಿಕ್ಷಣದ ಮೂಲಕ ಮುನ್ನಡೆ, ಕಾನೂನುಬದ್ಧ ಹಕ್ಕಿನ ಆಗ್ರಹ ಮತ್ತು ಲಿಂಗ ಸಮಾನತೆಯ ದೃಷ್ಟಿಕೋನ ಇವೆಲ್ಲವೂ ಸಮಗ್ರ ಪರಿವರ್ತನೆಯ ದಿಕ್ಕನ್ನು ಸೂಚಿಸುತ್ತವೆ. ಇಲ್ಲಿ ತುಳು ಕಾದಂಬರಿಗಳ ಶೈಲಿ ಕೇವಲ ಕಥೆ ಹೇಳುವ ಸಾಧನವಲ್ಲ, ಅದು ಸಾಮಾಜಿಕ ನ್ಯಾಯ ಮತ್ತು ದಲಿತ ಚಿಂತನೆಯ ಸಂದೇಶವನ್ನು ತಲುಪಿಸುವ ಪರಿಣಾಮಕಾರಿ ಮಾಧ್ಯಮವಾಗಿದೆ. ಪಾತ್ರಗಳ ಕ್ರಿಯೆಗಳು ಕಥೆಯನ್ನು ರೂಪಿಸುವುದರ ಜೊತೆಗೆ, ಕಥೆಯೇ ಪಾತ್ರಗಳನ್ನು ರೂಪಿಸುತ್ತದೆ. ಈ ಪರಸ್ಪರ ಕ್ರಿಯೆಯೇ ಸಾಮಾಜಿಕ ಬದಲಾವಣೆಯ ಸಂಕೇತವಾಗಿದೆ.

ಆದ್ದರಿಂದ, ತುಳು ಕಾದಂಬರಿಗಳು ಕೇವಲ ಕಲಾತ್ಮಕ ಸೃಷ್ಟಿಗಳಲ್ಲ, ಅವು ಶೋಷಿತ ಸಮುದಾಯದ ಧ್ವನಿಯಾಗಿ, ಆತ್ಮಗೌರವದ ಘೋಷಣೆಯಾಗಿ ಮತ್ತು ಸಾಮಾಜಿಕ ನ್ಯಾಯದ ಪರಿವರ್ತನಾ ದೃಷ್ಟಿಕೋನವಾಗಿ ರೂಪುಗೊಂಡ ಮಹತ್ವದ ಸಾಹಿತ್ಯಿಕ ಸಾಧನೆಗಳಾಗಿವೆ ಎಂದು ಪರಿಗಣಿಸಬಹುದು.


- ಸೌಮ್ಯ ಆನಂದಿ ಕೋಟ್ಯಾನ್: ಸಂಶೋಧನಾ ವಿದ್ಯಾರ್ಥಿ, ತುಳು ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸನಂ - - ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರ ಪ್ರದೇಶ - ೫೧೭೪೨೬
- ಡಾ. ಬಿ. ಎಸ್. ಶಿವಕುಮಾರ್ : ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು ತುಳು ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸನಂ - - ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರ ಪ್ರದೇಶ - ೫೧೭೪೨


## ಮೂಲ ಪಠ್ಯಗಳು : ಕಾದಂಬರಿಗಳು


**೧.** ಕುದ್ಕಾಡಿ ವಿಶ್ವನಾಥ ರೈ; ೧೯೯೪; ಲೆಕ್ಕೆಸಿರಿ; ಸಹಕಾರಿ ಪ್ರಕಾಶನ, ಪುತ್ತೂರು

**೨.** ಗಟ್ಟಿ.ಕೆ.ಟಿ; ೧೯೯೪; ಬೊಂಬಾಯಿದ ಇಲ್ಲ್; ಸಹಕಾರಿ ಪ್ರಕಾಶನ, ಪುತ್ತೂರು.

**೩.** ಜಾನಕಿ ಬ್ರಹ್ಮಾವರ ಎಂ; ೧೯೯೪; ಕುದುರುದ ಕೇದಗೆ; ಹೇಮಾಂಶು ಪ್ರಕಾಶನ, ಮಂಗಳೂರು.

**೪.** ಜಾನಕಿ ಬ್ರಹ್ಮಾವರ ಎಮ್; ೧೯೯೮; ಕಪ್ಪುಗಿಡಿ; ಹೇಮಾಂಶು ಪ್ರಕಾಶನ, ಮಂಗಳೂರು.

**೫.** ಜಿತು ನಿಡ್ಲೆ; ೧೯೯೯; ಮೂಜಂಜ ಆನಂಗ; ಕಾಡು ಪ್ರಕಾಶನ, ಗಾಣಂತಿ, ನಿಡ್ಲೆ

**೬.** ಮಾಧವ ಪೆರಾಜೆ; ೧೯೯೭; ನಿಲೆ; ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಮತ್ತು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

**೭.** ಸಂಕಲಕರಿಯ ಕೃಷ್ಣ ಸಾಲ್ಯಾನ್; ೧೯೯೭; ಚಂದ್ರಳ್ಳಿಡ್ ಬೊಳ್ಪಾಂಡ್; ತುಳುಕೂಟ ಉಡುಪಿ, ಮಣಿಪಾಲ.

## ಪರಾಮರ್ಶನ ಗ್ರಂಥಗಳು


**೧.**ಚಂದ್ರಹಾಸ.ಪಿ.; ೨೦೨೧; ಕರಾವಳಿ ಕರ್ನಾಟಕದ ಕಥನ ಸಾಹಿತ್ಯದಲ್ಲಿ ಸಂಘರ್ಷ ಮತ್ತು ಸಾಮರಸ್ಯದ ಸ್ವರೂಪಗಳು (ಆಯ್ದ ಸಣ್ಣ ಕಥೆ ಮತ್ತು ಕಾದಂಬರಿಗಳನ್ನು ಅನುಲಕ್ಷಿಸಿ); ಕನ್ನಡ ವಿಶ್ವವಿದ್ಯಾಲಯ, ಹಂಪಿ.

**೨.** ಜಲಜಾಕ್ಷಿ ಕೆ.ವಿ (ಡಾ); ೨೦೦೩; ತುಳು ಭಾಷೆ ಸಾಹಿತ್ಯ ಸಂಪ್ರದಾಯ; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು

**೩.** ನಿಕೇತನ ೨೦೧೪ ತುಳು ಸಾಹಿತ್ಯ ಪರಂಪರೆ ರಾಶಿ ಪ್ರಕಾಶನ, ಉಡುಪಿ.

**೪**. ರೈ. ಬಿ. ಎ ವಿವೇಕ ರೈ (ಡಾ) ೨೦೦೭ ತುಳು ಸಾಹಿತ್ಯ ಚರಿತ್ರೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**೫.** ಸುಧಾರಾಣಿ; ೨೦೨೦ ತುಳು ಅನುವಾದ ವಾಙ್ಮಯ:ಸಾಂಸ್ಕೃತಿಕ ಅನುಸಂಧಾನದ ನೆಲೆಗಳು. ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.